**ಶ್ರೀಹನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ**

# ಉಪನಿಷತ್ತಿನ ತಾತ್ಪರ್ಯ

1. ಉಪನಿಷತ್ತುಗಳು 'ಆತ್ಮರು ಅನೇಕ' ಎಂದು ಕೆಲವು ಕಡೆ ಹೇಳಿದರೆ ಮತ್ತೆ ಕೆಲವು ಕಡೆ 'ಆತ್ಮತತ್ವ ಒಂದೇ' ಎಂದು ಹೇಳುತ್ತವೆ. ಇವೆರಡೂ ವಿರುದ್ಧವಾದ ಸಿದ್ಧಾಂತ. ಆದ್ದರಿಂದ ಎರಡೂ ಸಿದ್ಧಾಂತಗಳು ಸರಿ, ಎಂದು ಸಮನ್ವಯ ಮಾಡಲು ಸಾಧ್ಯವಿಲ್ಲ. ಇವೆರಡರಲ್ಲಿ ಯಾವುದೋ ಒಂದು ಸಿದ್ಧಾಂತ ಮಾತ್ರ ಉಪನಿಷತ್ತಿಗೆ ಸಮ್ಮತವಾಗಿದೆ. ಅದು ಯಾವುದು ?

೨. ಏಕಾತ್ಮವಾದವೇ ಉಪನಿಷತ್ತಿನ ಸಿದ್ಧಾಂತ. ಅನೇಕಾತ್ಮವಾದವನ್ನು ಅದು ಅನುವಾದ ಮಾಡುತ್ತದೆ. ಅಂದರೆ ಜ್ಞಾನಿಗಳಲ್ಲದ ಸಾಮಾನ್ಯಜನರು 'ನಾನು ಬೇರೆ, ಅವನು ಬೇರೆ' 'ನಾನು ಅವನಲ್ಲ' ಹೀಗೆ ಅನೇಕ ಆತ್ಮರಿದ್ದಾರೆ ಎಂದು ತಿಳಿಯುತ್ತಾರೆ. ಅದು ಸ್ಥೂಲದೃಷ್ಟಿ. ಅದನ್ನು ಉಪನಿಷತ್ತುಗಳು ಯಥಾವತ್ತಾಗಿ ನಿರೂಪಿಸಿ ''ಅವರ ತಿಳಿವಳಿಕೆ ಸರಿಯಲ್ಲ. ದೇಹ ಬೇರೆಯಾದುದ-ರಿಂದ ಒಬ್ಬನೇ ಆತ್ಮನು ಅನೇಕವಾಗಿ ಕಾಣುತ್ತಾನೆ. ಒಂದೇ ಪಾತ್ರೆಯಲ್ಲಿರುವ ನೀರನ್ನು ಲೋಟ, ತಂಬಿಗೆ, ಬಿಂದಿಗೆಗಳಲ್ಲಿ ತುಂಬಿಸಿದಾಗ ನೀರು ಬೇರೆ ಬೇರೆಯಾಗಿ ಕಾಣುತ್ತದೆ. ಅವೆಲ್ಲವನ್ನೂ ಒಂದು ಪಾತ್ರೆಗೆ ಸುರಿದರೆ ಎಲ್ಲವೂ ಒಂದೇ. ಅದರಂತೆ ದೇಹಗಳಲ್ಲೂ ಇರುವ ಆತ್ಮತತ್ವ ಒಂದೇ. ಆದರೂ ದೇಹಗಳು ಬೇರೆ ಬೇರೆಯಾದುದರಿಂದ ಅದರಲ್ಲಿರುವ ಆತ್ಮನೂ ಬೇರೆ ಬೇರೆ ಎಂದು ತೋರುತ್ತದೆ. ವಸ್ತುತಃ ಆತ್ಮತತ್ವ ಒಂದೇ ಆಗಿದೆ. ಇದು ಏಕಾತ್ಮವಾದಿಗಳ ಅಭಿಪ್ರಾಯ.

ನ್ಯಾಯಾಮೃತಗ್ರಂಥದಲ್ಲಿ ಇದನ್ನು ಹೀಗೆ ವಿಮರ್ಶಿಸಲಾಗಿದೆ — ಉಪನಿಷತ್ತುಗಳು ಅನೇಕಾತ್ಮ-ವಾದವನ್ನು ತನ್ನ ಸಿದ್ಧಾಂತವಾಗಿ ಹೇಳುತ್ತಿಲ್ಲ, ಅದು ಅಜ್ಞಾನಿಗಳ ಅನುಭವವನ್ನು ನಮ್ಮ ಮುಂದೆ ಇಡುತ್ತವೆ, ಎನ್ನುವ ವಾದ ಸರಿಯಲ್ಲ. ಅದು ಸಾವಿರಾರು, ಕೋಟಿಕೋಟಿ ಜೀವಾತ್ಮರು ಇದ್ದಾರೆ ಎಂದು ಹೇಳಿದೆ. ಆದರೆ ನಾವಾರೂ ಇಷ್ಟು ಆತ್ಮರನ್ನು ನೋಡೇ ಇಲ್ಲ. ನಮಗೆ ನಮ್ಮ ಅನುಭವ ಮಾತ್ರ ಇದೆ.

ಅಷ್ಟೇ ಅಲ್ಲ. ಉಪನಿಷತ್ತು ಜೀವಾತ್ಮರ ವ್ಯಕ್ತಿತ್ವವೇ ಬೇರೆ, ಪರಮಾತ್ಮನ ವೈಭವವೇ ಬೇರೆ. ಅವರಿಬ್ಬರೂ ಒಂದಲ್ಲ; ಎಂದೂ ಒಂದಾಗುವುದಿಲ್ಲ ಎಂದೂ ಹೇಳುತ್ತದೆ. ಇದು ಯಾರಿಗಾದರೂ ತಿಳಿದಿದೆಯೇ ? ಯಾರಿಗೂ ದೇವರ ಕಲ್ಪನೆಯೇ ಇಲ್ಲ. ಹೀಗಿರುವಾಗ 'ನಾನು ದೇವರಲ್ಲ' ಎನ್ನುವ ಅನುಭವ ಇರುವುದಾದರೂ ಹೇಗೆ ? ಉಪನಿಷತ್ತುಗಳಿಂದ 'ದೇವರೆಂದರೆ ಏನು, ಹೇಗೆ ?' ಎಂದು ತಿಳಿದ ಮೇಲೆ 'ಅಂತಹ ದೇವರು ನಾನಲ್ಲ' ಎಂದು ನಮಗೆ ತಿಳಿಯಬಹುದು. ಅದಕ್ಕಿಂತ ಮೊದಲು ಅಂತಹ ಕಲ್ಪನೆ ನಮಗೆ ಬರಲು ಹೇಗೆ ಸಾಧ್ಯ ?

ಆದ್ದರಿಂದ ನಮಗೆ ತಿಳಿದ ಆತ್ಮಭೇದವನ್ನು ಉಪನಿಷತ್ತು ಅನುವಾದ ಮಾಡಿ ನಿರಾಕರಿಸುತ್ತದೆ ಎನ್ನಲಾಗದು. ಅದು ನಮ್ಮ ಅನುಭವಕ್ಕೆ ಬರದ ಭೇದಸಿದ್ಧಾಂತವನ್ನು ಸ್ಥಾಪಿಸುತ್ತದೆ.

೪. ಅದ್ವೈತಸಿದ್ಧಿ ಗ್ರಂಥದಲ್ಲಿ ಇದರ ಮೇಲೆ ಹೀಗೆ ಆಕ್ಷೇಪವನ್ನು ವ್ಯಕ್ತಪಡಿಸಲಾಗಿದೆ — ನಮ್ಮನ್ನು ನಾವು ತಿಳಿದಿದ್ದೇವೆ. ಅದರಂತೆಯೇ ಇನ್ನೊಬ್ಬರ ದೇಹದಲ್ಲೂ ಚಟುವಟಿಕೆಗಳನ್ನು ಕಂಡು ಅಲ್ಲೂ ನಮ್ಮಂತೆಯೇ ಒಬ್ಬ ಆತ್ಮನಿದ್ದಾನೆ, ಎಂದು ಊಹಿಸುತ್ತೇವೆ. ಹೀಗೆ ಒಂದೊಂದು ದೇಹದಲ್ಲಿ ಒಬ್ಬೊಬ್ಬ ಆತ್ಮನಿದ್ದಾನೆ ಎನ್ನುವ ತಿಳಿವಳಿಕೆ ಎಲ್ಲರಿಗೂ ಇರಬಹುದು.

ಅದರಂತೆ, ಈ ಜಗತ್ತನ್ನು ನೋಡಿ ಇದನ್ನು ಸೃಷ್ಟಿಮಾಡಿದ ದೇವರಿದ್ದಾನೆ ಎನ್ನುವ ಕಲ್ಪನೆಯನ್ನು ನಾವು ಮಾಡಿಕೊಳ್ಳಬಹುದು. 'ಅಂತಹ ಸೃಷ್ಟಿಕರ್ತ ನಾನಲ್ಲ' ಎಂದು ಪರಮಾತ್ಮನಿಂದ ನಮ್ಮಲ್ಲಿ ಭೇದವನ್ನು ಗುರುತಿಸಿಕೊಳ್ಳಬಹುದು. ಹೀಗೆ ಆತ್ಮಭೇದವು ಎಲ್ಲರ ಅನುಭವಕ್ಕೂ ಬಂದಿರುತ್ತದೆ. ಆದರೆ 'ಎಲ್ಲರಲ್ಲೂ ಆತ್ಮ ಒಂದೇ' ಎನ್ನುವ ಕಲ್ಪನೆ ಯಾರಿಗೂ ಬರುವುದಿಲ್ಲ. ಅದನ್ನು ಉಪನಿಷತ್ತೇ ಹೇಳಬೇಕು. ಹೀಗೆ ಏಕಾತ್ಮವಾದ ಉಪನಿಷತ್ತಿನಿಂದ ಮಾತ್ರ ತಿಳಿಯುವ ಅಪೂರ್ವ ಸಿದ್ಧಾಂತ. ಆತ್ಮಭೇದವಾದ ಎಲ್ಲರಿಗೂ ತಿಳಿದ ವಿಷಯ. ಅದನ್ನೇ ಮತ್ತೆ ಉಪನಿಷತ್ತು ಹೇಳುವುದು ಅಗತ್ಯವಿಲ್ಲ. ತಿಳಿದಿದ್ದನ್ನೇ ತಿಳಿಸಿದರೆ ಉಪನಿಷತ್ತುಗಳನ್ನು ಯಾರು ಓದುತ್ತಾರೆ ? ಆದ್ದರಿಂದ ಏಕಾತ್ಮವಾದವೇ ಉಪನಿಷತ್ತಿನ ಸಿದ್ಧಾಂತ. ಅನೇಕಾತ್ಮವಾದವಲ್ಲ.

೫. ಇದನ್ನು ಹೀಗೆ ವಿಮರ್ಶಿಸಬಹುದು— ನಮ್ಮ ಅನುಭವವೇನೋ ನಮಗಿದೆ. ಆದರೆ ಇದು ಎಷ್ಟು ದೃಢವಾದ ಅನುಭವ ? ವಿಜ್ಞಾನಿಯೋ, ಜಡವಾದಿಯೋ 'ದೇಹವೇ ಆತ್ಮ, ದೇಹಬಿಟ್ಟರೆ ಬೇರೇನೂ ಇಲ್ಲ' ಎಂದು ದೃಢವಾಗಿ ಸಮರ್ಥಿಸಿದರೆ ನಮಗೆ ಸಂಶಯ ಬರಲು ಆರಂಭವಾಗುತ್ತದೆ – ನಾನು ಎನ್ನುವ ತತ್ತ್ವ ಇದೆಯೋ ಇಲ್ಲವೋ ? ಎಂದು.

ಇದರಂತೆ, ದೇಹ ಮಾಡುವ ಕೆಲಸಗಳನ್ನೆಲ್ಲ ಇಂದಿನ ಕಂಪ್ಯೂಟರ್‌ಗಳು, ರೋಬೋಟುಗಳು ಮಾಡುತ್ತವೆ. ಅವುಗಳ ಒಳಗೆ ಆತ್ಮನಿದ್ದಾನೆಯೇ ? ಆತ್ಮನ ಅಸ್ತಿತ್ವವಿಲ್ಲದೆಯೇ ಅಲ್ಲಿ ಕೆಲಸಕಾರ್ಯಗಳು ನಡೆಯುವುದಾದಲ್ಲಿ ನಮ್ಮ ದೇಹದಲ್ಲೂ ಅದರಂತೆಯೇ ಏಕೆ ಕ್ರಿಯೆಗಳು ನಡೆಯಬಾರದು ? ಹೀಗೆ ಆತ್ಮನ ಅಸ್ತಿತ್ವದ ಬಗ್ಗೆ ನಮಗೆ ಇರುವ ಅನುಭವ ದೃಢವಾದುದಲ್ಲ. ಅದು ಶಿಥಿಲವಾದುದು.

ದೇವರ ಅಸ್ತಿತ್ವದ ಬಗ್ಗೆಯಂತೂ ದೊಡ್ಡ ವಿವಾದವೇ ಇದೆ. ದೇವರಿದ್ದಾನೆಂದು ತರ್ಕ-ಕುತರ್ಕಗಳಿಂದ ದೃಢವಾಗಿ ನಂಬಲು ಸಾಧ್ಯವೇ ಇಲ್ಲ. ಹೀಗಿರುವಾಗ ಅನೇಕ ಜೀವಾತ್ಮರು, ಅವರಿಗೆಲ್ಲ ನಿಯಾಮಕನಾದ ಭಗವಂತನ ಅಸ್ತಿತ್ವವನ್ನು ಉಪನಿಷತ್ತುಗಳೇ ದೃಢಪಡಿಸಬೇಕು. ಆದ್ದರಿಂದ ಜೀವರ ಅನೇಕತೆ, ಜೀವರಿಗಿಂತ ಭಿನ್ನನಾದ ದೇವರ ಅಸ್ತಿತ್ವ ಇವೆಲ್ಲವೂ ನಮಗೆ ದೃಢವಾಗಿ ತಿಳಿಯದ ತತ್ತ್ವಗಳು. ಅದನ್ನು ಉಪನಿಷತ್ತುಗಳು ತಿಳಿಸುತ್ತವೆ.

ಏಕಾತ್ಮವಾದವೇನೋ ಯಾರಿಗೂ ತಿಳಿಯದ ಸಿದ್ಧಾಂತವಾಗಿರಬಹುದು. ಅದು ನಮ್ಮೆಲ್ಲರ ಅನುಭವಕ್ಕೆ ವಿರುದ್ಧವಾದ ಸಿದ್ಧಾಂತ. ಅಂತಹ ಸಿದ್ಧಾಂತವನ್ನು ಉಪನಿಷತ್ತು ಹೇಳಿದರೆ ಅದು ಹೇಗೆ ಗ್ರಾಹ್ಯವಾದೀತು ?

**ಆದ್ದರಿಂದ ಅನೇಕಾತ್ಮವಾದವೇ ಉಪನಿಷತ್ತಿನ ಸಿದ್ಧಾಂತ. ಏಕಾತ್ಮವಾದವಲ್ಲ.**

★★★★★★★

# ಜೀವಕರ್ತೃತ್ವವಿಚಾರ

ಜೀವಾತ್ಮನಿಗೆ ಕರ್ತೃತ್ವ ಇದೆಯೋ, ಇಲ್ಲವೋ ಎನ್ನುವ ಬಗ್ಗೆ ಭಾರತೀಯದರ್ಶನಗಳಲ್ಲಿ ದೀರ್ಘಕಾಲದಿಂದ ವಿವಾದವಿದೆ. ಅತ್ಯಂತ ಪ್ರಾಚೀನದರ್ಶನಗಳಲ್ಲಿ ಒಂದಾದ ಸಾಂಖ್ಯದರ್ಶನವು, ಕರ್ತೃತ್ವವು ವಿಕಾರಾತ್ಮಕವಾದುದರಿಂದ ನಿರ್ವಿಕಾರನಾದ ಆತ್ಮನಲ್ಲಿ ಇರಲು ಸಾಧ್ಯವಿಲ್ಲ ಎಂದು ಹೇಳುತ್ತದೆ. ಅದ್ವೈತದರ್ಶನದಲ್ಲೂ ಇದೇ ಸಿದ್ಧಾಂತವನ್ನು ಸಮರ್ಥಿಸಲಾಗಿದೆ. ಕ್ರಿಯಾಶಕ್ತಿ ಜಡವಾದ ಅಂತಃಕರಣದ ಧರ್ಮ.  ಜ್ಞಾನಶಕ್ತಿ ಮಾತ್ರ ಚೇತನನಾದ ಜೀವನಲ್ಲಿದೆ. ಅಂತಃಕರಣದ ಸಂಬಂಧ ತಪ್ಪಿಹೋದಾಗ ಜೀವರಲ್ಲಿ ಕ್ರಿಯಾಶಕ್ತಿಯೂ ಇಲ್ಲದಾಗುತ್ತದೆ. ಕ್ರಿಯಾಶಕ್ತಿ ಇಲ್ಲದ ಜೀವನು ಕೆಟ್ಟ ಅಥವಾ ಒಳ್ಳೆಯ ಕೆಲಸಗಳನ್ನು ಮಾಡಲಾರ. ಹೀಗಾಗಿ ಅವನಿಗೆ ಪಾಪ-ಪುಣ್ಯಗಳ ನಂಟು ಇರುವುದಿಲ್ಲ, ಅದರಿಂದಾಗಿಯೇ ದುಃಖ-ಸುಖಗಳೂ ಅವನಿಗಿಲ್ಲ. ಅವನು ಮುಕ್ತನಾಗುತ್ತಾನೆ. ಇದಕ್ಕಾಗಿಯೇ ಜೀವನಿಗೆ ಕರ್ತೃತ್ವವೇ ಇಲ್ಲ ಎನ್ನುವ ಸಿದ್ಧಾಂತವನ್ನು ಕೆಲವು ದಾರ್ಶನಿಕರು ಸಮರ್ಥಿಸಿದ್ದಾರೆ.

ಆದರೆ ಜೀವನಿಗೆ ಕ್ರಿಯಾಶಕ್ತಿ ಇಲ್ಲದಿದ್ದರೆ ಶಾಸ್ತ್ರದ ವಿಧಿ-ನಿಷೇಧಗಳು ಯಾರಿಗೆ ? ಪರಮಾತ್ಮ-ನಿಗಂತೂ ಅಲ್ಲ. ಹೇಳುವುದಾದಲ್ಲಿ ಜೀವಾತ್ಮನಿಗೆ ಹೇಳಬೇಕು. ಅವನಲ್ಲೂ ಕ್ರಿಯಾಶಕ್ತಿ ಇಲ್ಲವೆಂದಾದಲ್ಲಿ 'ಹೀಗೆ ಮಾಡು, ಇದನ್ನು ಮಾಡಬೇಡ' ಎನ್ನುವ ಶಾಸ್ತ್ರದ ನಿರ್ಬಂಧ ಯಾರಿಗೆ ? ಹೀಗೆ ಶಾಸ್ತ್ರದಲ್ಲಿ ಹೇಳಿರುವ ವಿಧಿನಿಷೇಧಗಳು ಸಾರ್ಥಕವಾಗಬೇಕಾದರೆ ಜೀವನಿಗೆ ಕರ್ತೃತ್ವವನ್ನು ಹೇಳಲೇಬೇಕಾಗುತ್ತದೆ. ಇದನ್ನು ಬ್ರಹ್ಮಸೂತ್ರದಲ್ಲಿ ಶ್ರೀವೇದವ್ಯಾಸರು 'ಕರ್ತಾ ಶಾಸ್ತ್ರಾರ್ಥತ್ವಾತ್' ಎಂಬ ಸೂತ್ರದಲ್ಲಿ ಹೇಳಿದ್ದಾರೆ.

### ಜೀವನು ಅಸ್ವತಂತ್ರಕರ್ತೃ

ಜೀವನಲ್ಲಿರುವ ಕರ್ತೃತ್ವ ಪರಮಾತ್ಮನ ಅಧೀನವಾಗಿದೆ. ಕರ್ತೃತ್ವ ಎಂದರೆ ಜ್ಞಾನ, ಇಚ್ಛೆ, ಪ್ರಯತ್ನ. ಈ ಮೂರೂ ಗುಣಗಳು ಜೀವಾತ್ಮನಲ್ಲಿವೆ. ಜೀವರ ಯೋಗ್ಯತೆ, ಅವರು ಹಿಂದೆ ಮಾಡಿರುವ ಕರ್ಮ ಇವುಗಳನ್ನು ಅವಲಂಬಿಸಿ, ಅವರಿಗೆ ನಿಯಾಮಕನಾದ ಪರಮಾತ್ಮನು ಈ ಮೂರು ಗುಣಗಳನ್ನು ಪ್ರಚೋದಿಸುತ್ತಾನೆ. ಯೋಗ್ಯಜೀವನು ಪುಣ್ಯಕರ್ಮಗಳನ್ನು ಮಾಡಿದ್ದರೆ ಅವನಿಗೆ ಯೋಗ್ಯ ಪರಿಸರ, ತತ್ವಜ್ಞಾನಕ್ಕೆ ಬೇಕಾಗುವ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಾನೆ.

ಅರ್ಹತೆ ಇಲ್ಲದ ಜೀವನಿಗೆ ತತ್ವಜ್ಞಾನ ದೊರೆತರೂ ಸಾಧನೆಯ ಬಗ್ಗೆ ಇಚ್ಛೆಯೇ ಮೂಡದಂತೆ ಕೆಲವೊಮ್ಮೆ ಇಚ್ಛೆ ಬಂದರೂ ಅದಕ್ಕಾಗಿ ಪ್ರಯತ್ನ ನಡೆಯದಂತೆ ಮಾಡುತ್ತಾನೆ ಮತ್ತು ಕೆಲವೊಮ್ಮೆ ಯೋಗ್ಯರೊಂದಿಗೆ ಬೆರೆತು ಯೋಗ್ಯತೆಗೆ ಮೀರಿ ಪುಣ್ಯಗಳಿಸಿದರೆ ಅದನ್ನು ಹ್ರಾಸಮಾಡಲು ಬೇಕಾದ ಅಕಾರ್ಯವು ನಡೆಯುವಂತೆ ಮಾಡುತ್ತಾನೆ. ಇದೆ ಜೀವನಲ್ಲಿರುವ ಪರಾಧೀನಕರ್ತೃತ್ವ.

**ಪರಮಾತ್ಮನೇ ಮಾಡಿಸುವನಾದರೂ ಪಾಪದ ನಂಟು ಇಲ್ಲ**

ನಮ್ಮಿಂದಾಗುವ ಒಳಿತು ಕೆಡಕುಗಳೆರಡೂ ದೇವರಿಂದಲೇ ನಡೆಯುವುದಾದಲ್ಲಿ ಅದರಿಂದಾಗುವ ಪುಣ್ಯ-ಪಾಪಗಳೂ ಅವನಿಗೇ ಸೇರಬೇಕಲ್ಲವೇ ? ಮಾಡಿಸುವುದು ದೇವರು, ಪರಿಣಾಮ ನಮಗೆ. ಇದು ಯಾವ ನ್ಯಾಯ ? ದೇವರು ನಮ್ಮಿಂದ ಮಾಡಿಸುವುದು ಎಂದರೆ ಮರದ ಬೊಂಬೆಯನ್ನು ಕುಣಿಸುವಂತೆ ಅಲ್ಲ. ಅಥವಾ, ಫ್ಯಾಕ್ಟರಿಯಲ್ಲಿರುವ ಯಂತ್ರಗಳು ನಡೆಯು-ವಂತೆಯೂ ಅಲ್ಲ. ಒಳಿತೋ, ಕೆಡಕೋ ನಾವೇನು ಮಾಡುತ್ತೇವೆಯೋ ನಾವು ಇಚ್ಛೆ ಪಟ್ಟು ಮಾಡುತ್ತೇವೆ. ಮರದ ಬೊಂಬೆಗೆ, ಯಂತ್ರಗಳಿಗೆ ಇಂತಹ ಇಚ್ಛೆ ಇರುವುದಿಲ್ಲ. ಅದರಿಂದಾಗಿಯೇ ಅವುಗಳಿಗೆ ಪುಣ್ಯ-ಪಾಪಗಳಿಲ್ಲ. ಜೀವನಿಗೆ ಇದೆ.

ಮಾಡಿಸುವ ಪರಮಾತ್ಮನಿಗೂ ನಾವು ಮಾಡುವ ಸತ್ಕರ್ಮಗಳಿಂದಾಗುವ ಪುಣ್ಯ ಇದೆ. ಅವನಿಗೆ ಮಾತ್ರವಲ್ಲ ನಮ್ಮ ಅಂಗಾಂಗಗಳಲ್ಲಿದ್ದು ಪ್ರೇರಿಸುವ ದೇವತೆಗಳಿಗೂ ಪುಣ್ಯದ ಪಾಲಿದೆ. ಕೆಡಕು ಮಾಡಿದರೆ ಅದರ ಪಾಪ ದೇವನಿಗಾಗಲೀ ದೇವತೆಗಳಿಗಾಗಲೀ ಇಲ್ಲ. ಕಾರಣ, ದೇವ-ದೇವತೆಗಳು ನಾವು ಹಾಳಾಗಲೀ ಎಂದು ದ್ವೇಷದಿಂದ ನಮ್ಮಿಂದ ದುಷ್ಕರ್ಮಗಳನ್ನು ಮಾಡಿಸುವುದಿಲ್ಲ. ಪ್ರಾಚೀನ ಪಾಪದ ನಿಮಿತ್ತದಿಂದ ಕೆಟ್ಟಕೆಲಸಗಳನ್ನು ಮಾಡಿಸುತ್ತಾರೆ. ಭಗವಂತನ ಆಜ್ಞೆಯಂತೆ ಇಂತಹ ಕರ್ಮ-ಗಳನ್ನು ಮಾಡಿಸುವುದರಿಂದ ದೇವತೆಗಳಿಗೆ ಪುಣ್ಯವೇ ಬರುತ್ತದೆ, ಪಾಪವಲ್ಲ.

ವ್ಯಾವಹಾರಿಕ ಪ್ರಪಂಚದಲ್ಲಿ ಕೊಲೆ ಮಾಡಿದವನಿಗೂ ಶಿಕ್ಷೆ ಇದೆ, ಮಾಡಿಸಿದವನಿಗೂ ಇದೆ. ಏಕೆಂದರೆ, ಮಾಡಿಸುವವನಿಗೆ ಸ್ವಾರ್ಥದ ಸಿದ್ಧಿ, ದ್ವೇಷಸಾಧನೆಗಳಂತಹ ದುರುದ್ದೇಶವಿರುತ್ತದೆ. ಆದರೆ ಪರಮಾತ್ಮನಿಗೆ ಅದಿಲ್ಲ. ಆದುದರಿಂದ ಅವನಿಗೆ ಪಾಪದ ನಂಟು ಇಲ್ಲ.

**ಪರಾಧೀನಕರ್ತೃತ್ವ ನಿಷ್ಕ್ರಿಯತೆಗೆ ಕಾರಣವಾಗಬಹುದೇ ?**

ನಮ್ಮ ಎಲ್ಲ ಆಗುಹೋಗುಗಳೂ ಪೂರ್ವಕರ್ಮ, ಅದಕ್ಕನುಗುಣವಾದ ಪರಮಾತ್ಮನ ಪ್ರೇರಣೆ ಇವುಗಳಿಂದಲೇ ನಡೆಯುವುದಾದಲ್ಲಿ ನಾವು ಪ್ರಯತ್ನ ಮಾಡುವ ಅಗತ್ಯವೇನು ? 'ನೀನು ಹೀಗೆ ಮಾಡಬೇಕು' ಎಂದು ಹಿರಿಯರು ಆದೇಶಿಸುವ ಔಚಿತ್ಯವೇನು ? ನನ್ನಿಂದ ಹಾಗೆ ಆಗಬೇಕಾಗು-ವುದಿದ್ದಲ್ಲಿ ಆಗಿಯೇ ತೀರುತ್ತದೆ ತಾನೆ ? ಹೀಗೆ ಪರಾಧೀನಕರ್ತೃತ್ವವಾದ ನಿಷ್ಕ್ರಿಯತೆಯಲ್ಲಿ ಪರ್ಯವಸಾನಗೊಳ್ಳುವುದಿಲ್ಲವೇ ?

ಇಲ್ಲ, ಪುಣ್ಯಪಾಪಗಳು ಸುಖವನ್ನೋ ದುಃಖವನ್ನೋ ಉಂಟುಮಾಡಬೇಕಾಗಿದ್ದರೆ ನಮ್ಮಿಂದ

ಸತ್ಕಾರ್ಯವೋ ಅಸತ್ಕಾರ್ಯವೋ ನಡೆಯಲೇಬೇಕು. ಕಾರ್ಯನಡೆಯದೇ ಪುಣ್ಯಪಾಪಗಳು ಫಲಿಸುವುದೇ ಇಲ್ಲ. ಕಾರ್ಯ ನಡೆಯಬೇಕಾದರೆ ಪ್ರಯತ್ನ ಬೇಕೇ ಬೇಕು. ಭಗವಂತ ಅಂತಹವನಿಂದ ಪ್ರಯತ್ನ ನಡೆಸಿಯೇ ತೀರುತ್ತಾನೆ. 'ದೇವರೇ ಮಾಡಿಸಲಿ' ಎಂದು ಕೈಕಟ್ಟಿ ಕುಳಿತವನಿಗೆ ಸುಖಭೋಗದ ಅದೃಷ್ಟ ಇಲ್ಲವೆಂದೇ ಅರ್ಥ.

**ದತ್ತ ಸ್ವಾತಂತ್ರ್ಯ**

ಪರಮಾತ್ಮನು ಬ್ರಹ್ಮಾದಿದೇವತೆಗಳಿಗೆ ತಾರತಮ್ಯಕ್ಕೆ ಅನುಗುಣವಾಗಿ ಸ್ವಾತಂತ್ರ್ಯವನ್ನು ಕೊಡುತ್ತಾನೆಯೇ ?

ಹೌದು, ತನಗಿಂತ ಕೆಳಗಿನ ಜೀವರನ್ನು ಮತ್ತು ಜಡವಸ್ತುಗಳನ್ನು ತನ್ನ ಇಚ್ಛೆ ಬಂದಂತೆ ನಡೆಸಿಕೊಳ್ಳುವ ಸ್ವಾತಂತ್ರ್ಯ ಜೀವರಿಗೆ ಇದೆ. ಆದರೆ ರಾಜ ತನ್ನ ಸಾಮ್ರಾಜ್ಯವನ್ನು ತನ್ನ ಮಕ್ಕಳಿಗೆ ಕೊಟ್ಟು ತಾನು ಕಾಡಿಗೆ ಹೋಗುವಂತೆ ಪರಮಾತ್ಮನು ಜೀವರಿಗೆ ಸ್ವಾತಂತ್ರ್ಯವನ್ನು ಕೊಟ್ಟು ತಾನು ತಟಸ್ಥನಾಗಿ-ರುವುದಿಲ್ಲ. ಮಾಡುವವರಲ್ಲೂ ಮಾಡಿಸುವವನಲ್ಲೂ ತಾನು ಇದ್ದು ಅವರಿಂದ ಕ್ರಿಯೆಯನ್ನು ಮಾಡಿಸುತ್ತಾನೆ.

( ಈ ಲೇಖನಗಳು ಪೂರ್ಣಪ್ರಜ್ಞವಿದ್ಯಾಪೀಠದ ವತಿಯಿಂದ
ರಾಜಾಜಿನಗರದ ಪುಣ್ಯಧಾಮದಲ್ಲಿ ನಡೆದ **ಶಾಸ್ತ್ರೋತ್ಸವ** ಕಾರ್ಯಕ್ರಮದಲ್ಲಿ
ಪ್ರಕಟಿಸಲ್ಪಟ್ಟಿದ್ದು ಜಿಜ್ಞಾಸುಗಳ ಲಾಭಕ್ಕಾಗಿ ಕೊಡಲಾಗಿದೆ.)

FROM Vijayadasaru.net

★★★★★